# ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,ನ್ಯಾಯಾಲಯ, ಅಂಕೋಲಾ.

ಸಿ.ಸಿ. ನಂ.67–23

ಪಿ.ಡಬ್ಲ್ಯೂಃ6

ಸಿಡಬ್ಲ್ಯೂ–7

ಸಾಕ್ಷಿದಾರರ ಹೆಸರು : ಕೃಷ್ಣಾ ಅಣ್ಣಯ್ಯ ಗೌಡ

ತಂದೆಯ ಹೆಸರು : ಅಣ್ಣಯ್ಯ ಗೌಡ

ವಯಸ್ಸು : 45 ವರ್ಷ

ಉದ್ಯೋಗ : ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಕುಮಟಾ ಉಪ ವಿಭಾಗ

ವಾಸ : ಕುಮಟಾ

ದಿನಾಂಕಃ 20–02–2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆಃ ಸರಕಾರದ ಪರವಾಗಿ ಸ.ಸ. ಆ ರವರಿಂದ ಃ**

1. ನಾನು ದಿನಾಂಕಃ 22–4–2022 ರಿಂದ 24–8–2024 ರವರೆಗೆ ನಾನು ಅಂಕೋಲಾ ಉಪ ವಿಭಾಗದಲ್ಲಿ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಕಾರ್ಯ ನಿರ್ವಹಿಸಿದ್ದೇನೆ .

2. ಈ ಸಮಯದಲ್ಲಿ ಚಾಸಾ 6 ರವರು ರಾಮನಗುಳಿ ವಲಯದ ಅರಣ್ಯ ಮೊಕದ್ದಮೆ ಸಂಖ್ಯೆ 9/2021–22 ಪ್ರಕರಣದಂತೆ ದಿಃ5–1–2022 ಕ್ಕೆ ಸಂಬಂಧಿಸಿದಂತೆ ಪ್ರಕರಣದ ಸಂಪೂರ್ಣ ತನಿಖೆ ಕೈಗೊಂಡು ಕಡತವನ್ನು ನನಗೆ ವಹಿಸಿರುತ್ತಾರೆ . ನಾನು ಕಡತದಲ್ಲಿರುವ ಎಲ್ಲಾ ದಾಖಲಾತಿಗಳನ್ನು ಅರೋಪಿಗಳ ಹೇಳಿಕೆಗಳನ್ನು ಪರಿಶೀಲಿಸಿ ದಿಃ12–10–2023 ರಂದು ಮಾನ್ಯ ನ್ಯಾಯಾಲಯದ ಮುಂದೆ ಅಂತಿಮ ವರದಿ ಸಲ್ಲಿಸಿರುತ್ತೇನೆ .

**ಪಾಟೀ ಸವಾಲು ಃ ಆರೋಪಿ ಪರ ಶ್ರೀ ಆರ್ ಎನ್ ಎಚ್ ವಕೀಲರಿಂದಃ**

3. ಅಂತಿಮ ವರದಿ ಸಲ್ಲಿಸುವ ಪೂರ್ವದಲ್ಲಿ ಚಾಸಾ –1 ಮತ್ತು 4 ರವರು ಆ ದಿನ ಕರ್ತವ್ಯದಲ್ಲಿ ಇದ್ದರೊ ಇಲ್ಲವೊ ಎಂದು ನೀವು ದಾಖಲೆ ಪರಿಶೀಲನೆ ಮಾಡಿ ನೋಡಿರುತ್ತಿರೊ ಇಲ್ಲವೊ ಎಂದರೆ ಇಲ್ಲ . ಯಾವುದೆ ಸಿಬ್ಬಂದಿಯಾಗಲಿ ಅವರ ಕರ್ತವ್ಯದ ದಿನಚರಿಯನ್ನು ನನ್ನ ಸಮ್ಮುಖದಲ್ಲಿ ಕೊಡುವುದಿಲ್ಲ ಆದರೆ ವಲಯ

ಅರಣ್ಯಾಧಿಕಾರಿಗೆ ಕೊಡುತ್ತಾರೆ . ಅಂತಿಮ ವರದಿ ಸಲ್ಲಿಸುವ ಪೂರ್ವದಲ್ಲಿ ಸದ್ರಿ ಚಾಸಾ–1 ಮತ್ತು 4 ರವರು ಆ ದಿನ ಕರ್ತವ್ಯ ನಿರ್ವಹಿಸಿದ ಬಗ್ಗೆ ಕತರ್ವ್ಯದ ದಿನಚರಿಯನ್ನು ಕೊಡಬೇಕೆಂದು  ಅರಣ್ಯ ವಲಯ ಅಧಿಕಾರಿ ಬಳಿ ಕೇಳಿರುತ್ತೀರಾ ಎಂದರೆ ಇಲ್ಲ . ಅಂತಿಮ ವರದಿ ಸಲ್ಲಿಸುವ ಪೂರ್ವದಲ್ಲಿ ಈ ಪ್ರಕರಣದಲ್ಲಿ ಹೇಳಿರುವಂತೆ ಕಾಡು ಹಂದಿ ಯಾರಿಗೆ ಸಂಬಂಧಿಸಿದ ಜಾಗದಲ್ಲಿ ಸತ್ತು ಬಿದ್ದಿರುತ್ತದೆ ಎಂದು ದಾಖಲಾತಿ ಪರಿಶೀಲನೆ ಮಾಡಿ ನೋಡಿರುತ್ತೀರಾ ಎಂದರೆ ಇಲ್ಲ .ತನಿಖಾಧಿಕಾರಿಗಳು ಮತ್ತು ಪಿರ್ಯಾದಿದಾರರು ಹಾಕಿದ ಒಂದು ಸುಳ್ಳು ಪ್ರಕರಣಕ್ಕೆ ಸುಳ್ಳು ದೋಷಾರೋಪಣೆ ಪಟ್ಟಿ ಹಾಕಿರುತ್ತೀರಿ ಎಂದರೆ ಸರಿಯಲ್ಲ .

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು  ಮಾಡಿಸಲಾಯಿತು)

ಓ  ಹೇ ಕೆ ಸರಿ ಇದೆ.

ಹಿರಿಯ  ಸಿವಿಲ್  ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಅಂಕೋಲಾ.